# ಯುದ್ಧಸ್ಮಾರಕಗಳ ಅರುಣಾಚಲ

■ ಚಿತ್ರ– ಲೇಖನ: **ಶ್ರೀನಿವಾಸ ಜೋಕಟ್ಟೆ**

ಅರುಣಾಚಲ ಪ್ರದೇಶ ಭಾರತದಲ್ಲಿ ಮೊದಲಿಗೆ ಸೂರ್ಯೋದಯವಾಗುವ ರಾಜ್ಯ. ಶೇಕಡಾ 60ರಷ್ಟು ಅರಣ್ಯಪ್ರದೇಶ. ನದಿಗಳು, ಜಲಪಾತಗಳು, ಎತ್ತರದ ಪರ್ವತಗಳು, ವನ್ಯ ಪ್ರಾಣಿಗಳು, ಅಪರೂಪದ ವನೌಷಧಿಗಳು ಮತ್ತು ಬೌದ್ಧ ಮಠಗಳು ಪ್ರವಾಸಿಗರನ್ನು ಇಲ್ಲಿಗೆ ಮತ್ತೆ ಮತ್ತೆ ಕರೆಯುತ್ತವೆ. ಇಲ್ಲಿ 25ಕ್ಕೂ ಹೆಚ್ಚು ಬುಡಕಟ್ಟು ಜನಾಂಗದವರು ಕಾಣಸಿಗುತ್ತಾರೆ.

ಮುಖ್ಯ ಪರ್ಯಟನ ಸ್ಥಳವೇ ತವಾಂಗ್. ಒಟ್ಟು 16 ಆಡಳಿತಾತ್ಮಕ ಜಿಲ್ಲೆಗಳಲ್ಲಿ ತವಾಂಗ್ ಅತ್ಯಂತ ಚಿಕ್ಕದು. ಆದರೆ ಬೌದ್ಧಗುರು 14 ನೇ ದಲಾಯಿಲಾಮ ಟಿಬೆಟ್‌ನಿಂದ ತಪ್ಪಿಸಿಕೊಂಡು ಭಾರತಕ್ಕೆ ಆ ದಿನಗಳಲ್ಲಿ ಓಡಿಬಂದದ್ದು ಮೊದಲು ತವಾಂಗ್‌ಗೆ. ಇಲ್ಲಿನ ಹವೆಯೂ ತಣ್ಣಗಿದೆ. ದಿರಾಂಗ್, ಬೊಮ್‌ಡಿಲಾ, ಟಿಪಿ, ಭಾಲುಕ್‌ಪೊಂಗ್, ರಾಜಧಾನಿ ಇಟಾನಗರ, ದಾಪೊರಿಜೋ, ಪಾಸೀ ಘಾಟ್, ಜೀರೋ– ಹೀಗೆ ಪ್ರವಾಸಿಗರು ನೋಡಬಹುದಾದ ಇನ್ನಷ್ಟು ಸ್ಥಳಗಳಿವೆ. ಭಾರತೀಯರು ಅರುಣಾಚಲ ಪ್ರದೇಶಕ್ಕೆ ಬರಬೇಕಾದರೆ ಇನ್ನರ್ ಲೈನ್ ಪರ್ಮಿಟ್ ಪಡೆಯಬೇಕಾಗುತ್ತದೆ. ಚೀನಾ ಜೊತೆಗಿನ 1962 ರ ಯುದ್ಧದ ನೆನಪುಗಳನ್ನು ಮತ್ತೆ ಕೆದಕುವಂತಹ ಪರಿಸ್ಥಿತಿಯ ಅರುಣಾಚಲದಲ್ಲಿ, ಇಂದಿಗೂ ಪ್ರವಾಸಿಗರು ಅಂದಿನ ಸೈನಿಕರ ಸಾಹಸದ ಕತೆಗಳನ್ನು ನೆನಪಿಸಿಕೊಳ್ಳಲು ತವಾಂಗ್ ವಾರ್ ಮೆಮೋರಿಯಲ್ ಮತ್ತು ಸೆಲ್ಲಾ ಪಾಸ್‌ನ ಜಸ್‌ವಂತ್ ಘರ್‌ಗಳನ್ನು ನೋಡಬಹುದು.

ಅಸ್ಸಾಂನ ಗುವಾಹಟಿಯಿಂದ ಮೇಘಾಲಯ ರಾಜ್ಯದ ಪ್ರಮುಖ ಸ್ಥಳಗಳನ್ನು ಸುತ್ತಾಡಿ ನಮ್ಮ ಕಾರು ಅರುಣಾಚಲವನ್ನು ಪ್ರವೇಶಿಸಿತು. ಟಿಪಿ, ವೆಸ್ಟ್ ಕಮೆಂಗ್, ದಾಟಿ ಬೊಮ್‌ಡಿಲಾಕ್ಕೆ ಬರುವಾಗ ಕತ್ತಲಾಯಿತು. ಅಲ್ಲಿ ಒಂದು ರಾತ್ರಿ ಉಳಿಯಲೇಬೇಕು. ಮರುದಿನ ಬೆಳಿಗ್ಗೆ ನಮ್ಮ ಪಯಣ ತವಾಂಗ್ ಕಡೆ ಹೊರಟಿತು. ಬೆಳಿಗ್ಗೆ ಹೊರಟರೆ ತವಾಂಗ್‌ಗೆ ರಾತ್ರಿ ತಲುಪುವುದು ಎಂದು ಮೊದಲೇ ಡ್ರೈವರ್ ಹೇಳಿದ್ದ. ಬೊಮ್‌ಡಿಲಾದಲ್ಲಿ ಬೇಗನೆ ಎದ್ದು ಒಂದಿಷ್ಟು ತಿರುಗಾಡಿ ನಮ್ಮ ಕಾರು ತವಾಂಗ್‌ನತ್ತ ಹೊರಟಿತು.

ದಾರಿಯಲ್ಲಿ ದಿರಂಗ್‌ನ ಪ್ರೇಕ್ಷಣೀಯ ತಾಣಗಳನ್ನು, ಕಿವಿ ಗಾರ್ಡನ್‌ಗಳನ್ನು (ಅರುಣಾಚಲದಲ್ಲಿ ಬೆಳೆಯುವ ಒಂದು ವಿಶೇಷವಾದ ಹಣ್ಣಿನ ಉದ್ಯಾನ) ವೀಕ್ಷಿಸಿ ಮುಂದೆ ಹೋಗುವಾಗ ಭಾರತ– ಚೀನಾ ನಡುವೆ 1962 ರ ಯುದ್ಧದ ನೆನಪುಗಳನ್ನು ಬಿಚ್ಚಿಡುವ ವೀರಯೋಧರ ಸಾಹಸದ ಕತೆಗಳೂ ಎದುರಾಗತೊಡಗಿದವು.

ಭಾರತ ದಲಾಯಿಲಾಮರಿಗೆ ಆಶ್ರಯ ನೀಡಿದ ಹಿನ್ನೆಲೆಯಲ್ಲಿ ಚೀನಾಕ್ಕೆ ಭಾರತದ ಮೇಲೆ ಸಿಟ್ಟಿದೆ. ಹಾಗೆಂದೇ ಅರುಣಾಚಲವನ್ನು ತನ್ನ ದೇಶದ ಭಾಗ ಎಂದು ಚೀನಾ ಆಗಾಗ ನಕ್ಷೆಯ ಮೂಲಕ ತೋರಿಸಿ ಕೆಣಕುತ್ತದೆ. ಇದೀಗ ಮತ್ತೆ ಚೀನಾ– ಭಾರತ ನಡುವಿನ ಗಡಿ ವಿವಾದ ಜೋರಾಗಿದೆ.

ಹಿಂದೆ ತವಾಂಗ್ ಟಿಬೆಟ್ ಆಡಳಿತಕ್ಕೆ (ಲ್ಹಾಸಾ) ಒಳಪಟ್ಟಿದ್ದರೆ ಬ್ರಿಟಿಷರು ಅದನ್ನು ಭಾರತಕ್ಕೆ ಸೇರಿಸಿದ್ದರು. ಆವಾಗ ಟಿಬೆಟ್ ಅನ್ನು ಚೀನಾ ಆಕ್ರಮಿಸಿರಲಿಲ್ಲ. ಆಕ್ರಮಿಸಿಕೊಂಡ ನಂತರ, ಹದಿನಾಲ್ಕನೆಯ ದಲಾಯಿ ಲಾಮ 1959ರಲ್ಲಿ ಭಾರತದ ತವಾಂಗ್ ಮೂಲಕ ತಪ್ಪಿಸಿಕೊಂಡು ಬಂದರು. 1962ರಲ್ಲಿ ಚೀನಾ ಸೇನೆ ಅರುಣಾಚಲದ ಗಡಿ ಪ್ರದೇಶದಿಂದ ಒಳಬಂದದ್ದು

